ಅಂಥ ಚೈತನ್ಯ ಇದೆ ಅಂದ್ಮೇಲೆ ನಾನ್ಯಾಕೆ ಸೋತು ಮೂಲೇಗೆ ಕೂರ್ಬೇಕು ಅನ್ನಿಸ್ತು. ಅದೇ ದಿನಗಳಲ್ಲಿ ದೊಡ್ಡದೊಂದು ಹೋರಾಟಾನ ನಾನು ಸಂಘಟಿಸಬೇಕಾಯ್ತು. ನಿನಗೂ ಅದು ಗೊತ್ತಿರ್ಬೇಕು. ತೊಂಬತ್ತರ ದಶಕದ ಆಸುಪಾಸಿನಲ್ಲಾಯ್ತು ಅದು. ಆಗ ಬಿದ್ದ ಹೊಡೆತ ಇದೆಯಲ್ಲ. ಅದು ನನ್ನನ್ನ ಮಕಾಡೆ ಮಲಗಿಸಿ ಬಿಡ್ತು ನೋಡು' ಅಂದೆ.

'ಪೇಪರಿನಲ್ಲಿ ಬಂದಿತ್ತಣ್ಣ. ನಿಮ್ಮ ಬಗ್ಗೆ ಏನೇನೋ ಬರೆದಿದ್ರು. ಆದರೂ ಈ ಪೇಪರಿನವರು ಯಾವತ್ತು ತಾನೇ ನಮ್ಮಂತೋರ ಬಗ್ಗೆ ಒಳ್ಳೆ ಮಾತಾಡಿದ್ದಾರೆ ಹೇಳಣ್ಣ?' ಅಂದ ಅಪ್ಝಲ್.

'ಅವರ ಮೇಲೆ ಕೋಪ ಮಾಡ್ಕೊಂಡ್ರೆ ಏನು ಪ್ರಯೋಜನ ಅಪ್ಝಲ್. ನನಗೇ ಸ್ವಲ್ಪ ಮುಂದಾಲೋಚನೆ ಇರ್ಬೇಕಾಗಿತ್ತು ಅಷ್ಟೆ. ಅವತ್ತು ನಮ್ಮ ಮೆರವಣಿಗೇನ ಹಾಳು ಮಾಡ್ಬೇಕೂಂತ ಏನೋ ಸಂಚು ನಡೀತಂತೆ. ಅಂತಾದ್ದನ್ನೆಲ್ಲ ನಾವು ಗಮನಿಸ್ಬೇಕು ಅಲ್ವಾ? ನಾಯಕನಾದೋನಿಗೆ ಮೈಯೆಲ್ಲ ಕಣ್ಣಿರಬೇಕೂಂತ ಅದಕ್ಕೆ ನಾನು ಹೇಳಿದ್ದು. ಅವತ್ತಿನ ಮೆರವಣಿಗೇಲಿ ಕಾಲೇಜು ವಿದ್ಯಾರ್ಥಿಗಳೇ ಜಾಸ್ತಿ ಇದ್ರು. ನಮ್ಮ ಮೆರವಣಿಗೆ ಮಾರ್ಕೆಟ್ಟಿನ ಹತ್ತಿರಕ್ಕೆ ಬಂತು. ಅದ್ಯಾರು ಅದೆಲ್ಲಿಂದ ನಮ್ಮ ಮೆರವಣಿಗೆ ಮೇಲೆ ಕಲ್ಲೆಸೆದ್ರೋ ಗೊತ್ತಿಲ್ಲ. ಆಮೇಲೆ ಅದರ ಹಿಂದೇನೆ ಬಾಟ್ಲಿಗಳೂ ತೂರಿ ಬರೋದಕ್ಕೆ ಶುರುವಾಯ್ತು. ನೋಡ್ತಾ ಇದ್ದ ಹಾಗೇನೆ ಅಲ್ಲಿ ರಣರಂಗ ಸೃಷ್ಟಿ ಆಗೋಯ್ತು. ನಮ್ಮ ಮೆರವಣಿಗೇಲಿ ಇದ್ದೋರೆಲ್ಲ ಹಳ್ಳಿಗಳಿಂದ ಕಾಲೇಜು ಓದಿಗೇಂತ ಬಂದಿದ್ದ ಹುಡುಗರು ಪಾಪ. ನನಗೆ ಅವರ ಬಗ್ಗೆ ಆತಂಕ ಆಯ್ತು. ಆ ಕೂಗಾಟ ಚೀರಾಟಗಳ ಮಧ್ಯೆ ಆ ಹುಡುಗರನ್ನ ಕಾಪಾಡಿಕೊಳ್ಳೋಕೆ ಏನ್ಮಾಡೋದು ಅಂತಾನೇ ನನಗೆ ತೋಚಲಿಲ್ಲ. ನಾನು ಹಾಗೆ ಚಡಪಡಿಸ್ತಾ ಇದ್ದಾಗಲೇ ನನ್ನ ಕಾಲಿಗೆ ಬಲವಾದ ಏಟು ಬಿತ್ತು. ಜೀವ ತತ್ತರಿಸಿ ಹೋಯ್ತು. ಅಯ್ಯಪ್ಪಾ ಅಂತ ಅಲ್ಲೇ ಕೂತುಬಿಟ್ಟೆ. ಆಮೇಲೆ ನನ್ನ ತಲೇಗೂ ಎರಡೇಟು ಬಿತ್ತು.

'ಅಣ್ಣಾ ಬಿದ್ರು ಕಣಲೇ' ಅಂತ ಯಾರೋ ಕಿರಿಚಿದ್ದು ಮಾತ್ರ ಕೇಳಿಸಿತು ಅಷ್ಟೆ. ಆಮೇಲೆ ಏನಾಯ್ತೂಂತ ನನಗೆ ಗೊತ್ತಾಗ್ಲಿಲ್ಲ. ಎಚ್ಚರ ಆದಾಗ ನೋಡಿದ್ರೆ ಆಸ್ಪತ್ರೇಲಿದ್ದೆ. ವಾರ್ಡಿನ ಹತ್ತಿರ ಪೊಲೀಸರ ಕಾವಲಿತ್ತು. ಏನಾಯ್ತೂಂತ ಅವರನ್ನೇ ಕೇಳಿದೆ.

'ಗೋಲೀಬಾರ್ ಆಯ್ತು. ಗೋಲಿಬಾರ್‌ನಲ್ಲಿ ಮೂವರು ಕಾಲೇಜು ಹುಡುಗರು ಸತ್ತು ಹೋದ್ರು. ನೂರಾರು ಜನ ಆಸ್ಪತ್ರೇಲಿದ್ದಾರೆ' ಅಂದ್ರು.

ಅವತ್ತೆಲ್ಲ ಬೆಂಗಳೂರು ಹತ್ತಿ ಉರೀತಂತೆ. ಆ ಗಲಾಟೇಲಿ ನನ್ನ ಕಾಲು ಶಾಶ್ವತವಾಗಿ ಕುಂಟಾಯ್ತು. ಅದನ್ನು ಹೇಗೋ ಸಹಿಸಿಕೊಂಡಿದ್ದೀನಿ. ಅವತ್ತಿನ ನಮ್ಮ ಹೋರಾಟಕ್ಕೆ ಗೆಲುವು ಕೂಡ ಸಿಕ್ತು. ಆದರೆ ಅಮಾಯಕರು ಜೀವ ಕಳ್ಕೋಬೇಕಾಯ್ತು. ಅವತ್ತವತ್ತಿಗೆ ದುಡಿದು ತಿನ್ನೋ ಜನ ನರಳಬೇಕಾಯ್ತು. ಅದನ್ನ ತಿಳ್ಕೊಂಡ್ರೆ ಇವತ್ತಿಗೂ ಸಂಕಟ ಆಗ್ತದೆ ಕಣಯ್ಯಾ. ನೀನು ನಂಗೆ ತಮ್ಮ ಇದ್ದಂಗೆ ಕಣಯ್ಯ ಅಪ್ಝಲ್. ನಿನ್ನ ಮುಂದೆ ಇವೆಲ್ಲ ಹೇಳಿದ್ರೆ ಮನಸ್ಸು ನಿರಾಳ ಆಗ್ತದೇಂತ ಹೇಳ್ತಿದ್ದೀನಿ. ಬೇಸರ ಮಾಡ್ಕೋಬೇಡಪ್ಪ' ಅಂದೆ. 'ಅಯ್ಯೋ ನೀವ್ಯಾಕಣ್ಣ ಹಂಗೆಲ್ಲ ಮಾತಾಡ್ತೀರಿ. ನಾಡೂಂತ ಭಾಷೇಂತ ಹೋರಾಡೋ ನಮ್ಮಂತೋರನ್ನ ತುಚ್ಛವಾಗಿ ನೋಡೋ ಜನಾನೇ ಜಾಸ್ತಿ. ದುಃಖಾನ ನಾವೇ ಒಬ್ಬರಿಗೊಬ್ಬರು ಹೇಳ್ಕೊಂಡಿಲ್ಲಾಂದ್ರೆ ಹೇಗಣ್ಣ' ಅಂದ.

'ಸಂಘಟನೆ ಬೆಳೆಸಲಿಕ್ಕೆ ಆಮೇಲೆ ನನ್ನಿಂದಾಗಲಿಲ್ಲ. ಹದಿನೈದು ವರ್ಷ ಆಯ್ತು ಅನ್ಸುತ್ತೆ ನಾನು ಸಂಘಟನೆ ಬಿಟ್ಟು. ಅಷ್ಟರಲ್ಲಿ ಮೈ ತುಂಬ ಸಾಲ ಮಾಡ್ಕೊಂಡಿದ್ದೆ. ಈಗಲೂ ಮನೆ ಹತ್ರ ಹಳೇ ಸಾಲಗಾರರು ಬಂದು ರಂಪ ಮಾಡ್ತಾರೆ. ಆಮೇಲೆ ನನ್ನ ಸ್ಥಿತಿ ನೋಡಿ ಮರುಗಿ ಅವರೇ